ದಿಃ03.12.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ. ಎಂ.ಎಂ., ವಕೀಲರಿಂದಃ

1. ನಾನು ಬುರ್ಖಾ ಹಾಕಿಕೊಂಡು ಓಡಿ ಹೋದಾಗ ನನ್ನೊಂದಿಗೆ ಯಾರು ಬಂದಿರುತ್ತಾರೆ ಎಂದು ನಾನು ನೋಡಿರುವುದಿಲ್ಲ.

2. ಸದರಿ ಬಿಬಿ ಆಯೀಷಾ ಇವಳ ಶವ ಶುಕುರ್ ಸಾಬ್‌ರ ಆಸ್ಥಾನ ಇದ್ದು, ಅದರ ಆಚೆ ನೀರಿನ ಕಾಲುವೆ ಇದ್ದು, ಅದರ ಪಕ್ಕದಲ್ಲಿ ಕಸ ಇದ್ದು ಆ ಕಸದಲ್ಲಿ ಇತ್ತು.

3. ಸದರಿ ಸ್ಥಳಕ್ಕೆ ನನ್ನ ಅಣ್ಣ ಚಾಸಾ.1 ಮತ್ತು ನನ್ನ ಅತ್ತಿಗೆ ಚಾಸಾ.9 ಯಾವಾಗ ಬಂದಿರುತ್ತಾರೆ ಎಂಬುದನ್ನು ನಾನು ನೋಡಿರುವುದಿಲ್ಲ.

4. ಆ ಸಮಯದಲ್ಲಿ 1ನೇ ಆರೋಪಿ ಮೊಹಮ್ಮದ್ ವಾಸಿಲ್ ಈತನೂ ಸಹ ಓಡೋಡಿ ಆ ಸ್ಥಳಕ್ಕೆ ಬಂದಿದ್ದನು ಎಂಬುದನ್ನು ನಾನು ನೋಡಿರುವುದಿಲ್ಲ.

5. ನಾನು ಸದರಿ ಸ್ಥಳಕ್ಕೆ ಹೋಗುವುದಕ್ಕೆ ಮುಂಚೆಯೇ ಪೊಲೀಸರು ಬಂದಿದ್ದರು.

6. ಸದರಿ ಶವವನ್ನು ಪೊಲೀಸರು ಆಸ್ಪತ್ರೆಗೆ ರವಾನಿಸಿದ ನಂತರ ಅಲ್ಲಿ ಶ್ವಾನದಳವನ್ನು ತಂದಿದ್ದರು.

7. ಸದರಿ ಪೊಲೀಸ್ ಶ್ವಾನ ಯಾವ ಕಡೆಗೆ, ಎಲ್ಲೆಲ್ಲಿ ಮತ್ತು ಎಲ್ಲಿಯವರಗೆ ಹೋಗಿತ್ತು ಎಂಬುದನ್ನು ನಾನು ಸ್ವತಃ ಕಂಡಿರುವುದಿಲ್ಲ.

8. ಸದರಿ ಸ್ಥಳಕ್ಕೆ ನಾನು ಹೋದ ಅರ್ಧ ಗಂಟೆ ಒಳಗೆ ಪೊಲೀಸರು ಸದರಿ ಶವವನ್ನು ಆಸ್ಪತ್ರೆಗೆ ಸಾಗಿಸಿರುತ್ತಾರೆ.

9. ಆ ಜಾಗದಲ್ಲಿ ಸುಮಾರು ಸಾವಿರ ಜನ ಸೇರಿದ್ದರು.

10. ಸದರಿ ಶವದ ಹತ್ತಿರ ಪೊಲೀಸರು ಬಿಡದೇ ಇದ್ದುದ್ದರಿಂದ ದೂರದಲ್ಲಿ ನಿಂತು ನೋಡಿದಾಗ ಸದರಿ ಶವ ಕಂಠದವರೆಗೆ ಚೀಲದಲ್ಲಿ ಇದ್ದಿದ್ದು, ಎಡಗಣ್ಣು ಹೊರಗೆ ಬಂದಿದ್ದು, ತಲೆ ಮತ್ತು ಮುಖದ ಹೊರವಲಯದಲ್ಲಿ ಗಾಯಗಳು ಆದಂತೆ ಕಾಣುತ್ತಿತ್ತು.

11. ಆ ಸಮಯದಲ್ಲಿ ನನ್ನೊಂದಿಗೆ ಅಲ್ಲಿ ಯಾರು ಇದ್ದರು ಎಂಬುದು ನನಗೆ ಗೊತ್ತಿಲ್ಲ.

12. ನಂತರ ನಾನು ಸ್ಥಳದಲ್ಲಿ ಸದರಿ ಶವವನ್ನು ನೋಡಿದ್ದರಿಂದ ಮಾನಸಿಕವಾಗಿ ಆಘಾತಕ್ಕೊಳಗಾಗಿ ನನ್ನನ್ನು ಯಾರೋ

ಅಲ್ಲಿಯೇ ಕೂಡರಿಸಿಕೊಂಡಿದ್ದರು.

13. ತದನಂತರ, ನಾನು ಎಚ್ಚರಗೊಂಡಾಗ ನಾನು ನನ್ನ ಅಣ್ಣನ ಮನೆಯಲ್ಲಿ ಇದ್ದು, ಆಗ ಅಲ್ಲಿ ಯಾರು ನನ್ನನ್ನು ಕರೆದುಕೊಂಡು ಬಂದಿದ್ದರು ಎಂಬುದು ಗೊತ್ತಿಲ್ಲ.

14. ನಮ್ಮ ಮುಸ್ಲಿಂ ಸಮುದಾಯದಲ್ಲಿ ನರಬಲಿ ಎನ್ನುವುದು ಇರುವುದಿಲ್ಲ ಎನ್ನುವುದು ಸರಿ.

15. ಬಿಬಿ ಆಯೀಷಾ ಇವಳ ಸಾವಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇರದೇ ಇದ್ದರೂ ಸಹ, ಚಾಸಾ.1 ನನ್ನ ಅಣ್ಣ ಮತ್ತು ಚಾಸಾ.16 ರೇಷ್ಮಾ ತಾಜ್ ಇವರ ಮಾತು ಕೇಳಿ ಈಗ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

16. ನಾನು ವಾಸ್ತವಿಕವಾಗಿ ಆದಿನ ಮಾಗಡಿಗೆ ಹೋಗದೇ ಇದ್ದುದ್ದರಿಂದ ಅಲ್ಲಿ ಯಾವುದೇ ಶವವನ್ನು ನೋಡಲು ಹೋಗಿರುವುದೇ ಇಲ್ಲ ಎಂದು ಸೂಚಿಸುವುದು ಸರಿಯಲ್ಲ.

17. ಈದಿನ ಚಾಸಾ.1 ನನ್ನ ಅಣ್ಣ ನ್ಯಾಯಾಲಯಕ್ಕೆ ಬಂದಿರುತ್ತಾನೆ ಎನ್ನುವುದು ಸರಿ.

18. ಚಾಸಾ.1 ಈತನೇ ಚಾಸಾ.11 ಮತ್ತು 12 ಇವರನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾನೆ ಎನ್ನುವುದು ಸರಿ.

19. ಚಾಸಾ.1 ಈತನು ನನಗೆ ಕಲಿಸಿಕೊಟ್ಟ ಮೇರೆಗೆ, ಆ ಪ್ರಕಾರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.